## ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ; ಕನಕಪುರ.

ಸಿ.ಸಿ 604/10

ಚಾಸಾ 2 ಪ್ರಾಸಾ 1

| | |
|---|---|
| ಹೆಸರು | ಃ ಲಕ್ಷ್ಮಮ್ಮ |
| ಗಂಡ/ತಂದೆಯ ಹೆಸರು | ಃ ಮಾದೇವ |
| ವಯಸ್ಸು | ಃ 50 |
| ಉದ್ಯೋಗ | ಃ ಕೂಲಿ |
| ವಾಸ | ಃ ಹೊನಗನಹಳ್ಳಿ |

ದಿಃ 22.08.2014 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.
ಮುಖ್ಯ ವಿಚಾರಣೆ ಎಪಿಪಿಯವರಿಂದ ಃ

ಆರೋಪಿ ಗೊತ್ತು, ಆತ ನನ್ನ ಅಳಿಯನಿರುತ್ತಾನೆ. ಆರೋಪಿ ನನಗೆ ಹೊಡೆದಿರುವುದಿಲ್ಲ, ಆತನಿಗೂ ನಮಗೂ ಗಲಾಟೆಯಾಗಿರುವುದಿಲ್ಲ, ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ, ಚಾಸಾ 4 ತೀರಿಕೊಂಡು 3 ವರ್ಷಗಳಾಗಿರುತ್ತದೆ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ನೀಡಲಾಯಿತು.

ಪಾಟೀ ಸವಾಲು ಃ ಮಾನ್ಯ ಎಪಿಪಿಯವರಿಂದ ಃ

ದಿಃ 23-7-10 ರಂದು ಆರೋಪಿ ನನ್ನ ಮನೆಗೆ ಬಂದಿದ್ದ ಎಂದರೆ ಸರಿಯಲ್ಲ, ಆತ ಮತ್ತು ನಾವು ಕೂಡಿ ಎಳ್ಳನ್ನು ಮಾರಾಟ ಮಾಡುತ್ತೇವೆಂದರೆ ಸರಿಯಲ್ಲ, ಆರೋಪಿ ಎಳ್ಳನ್ನು ಕಳ್ಳತನ ಮಾಡಿ ತೆಗೆದುಕೊಂಡು ಹೋಗಿದ್ದು, ಆ ದಿನ ನಾನು ಆರೋಪಿಗೆ ಪ್ರಶ್ನೆ ಮಾಡಿದ್ದೆ ಎಂದರೆ ಸರಿಯಲ್ಲ, ಅದಕ್ಕೆ ಆರೋಪಿ ಸಿಟ್ಟಾಗಿ ಮೂಲೆಯಲ್ಲಿದ್ದ ನನ್ನ ಅತ್ತೆಯವರು ಊರುಗೋಲನ್ನು ತೆಗೆದುಕೊಂಡು ನನ್ನ ತಲೆಗೆ ಮತ್ತು ಎರಡೂ ಕೈಗಳಿಗೂ ಹೊಡೆದು ರಕ್ತಗಾಯ ಪಡಿಸಿದ ಎಂದರೆ ಸರಿಯಲ್ಲ, ನನ್ನ ಕೂಗಾಟದ ಶಬ್ದಕೇಳಿ ಚಾಸಾ 3 ಮತ್ತು 4 ಇವರು ಬಂದು ಬಿಡಿಸಿಕೊಂಡರು

ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದಲೇ ಆರೋಪಿ ನನಗೆ ಹೊಡೆದಿರುತ್ತಾನೆಂದರೆ ಸರಿಯಲ್ಲ. ಸದರಿ ದೊಣ್ಣೆಯನ್ನು ಎಂ.ಓ 1 ಎಂದು ಗುರ್ತಿಸಲಾಯಿತು. ಈಗ ಓದಿ ಹೇಳಿದಂತೆ ನಾನು "ದಿಃ 23-7-10......ಗುರ್ತಿಸುತ್ತೇನೆ." ಎಂದು ನಿಪಿ 1 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಈಗ ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಇಲ್ಲಃ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

ಓ ಹೇ ಕೇ ಸ ಇ

ಮೊದಲನೇ ಅಪರ ಸಿಜೆ ಮತ್ತು
ಜೆಎಂಎಫ್‌ಸಿ, ಕನಕಪುರ.